## ಜೆಎಸ್‌ಎಸ್ ಮಹಾವಿದ್ಯಾಪೀಠ
## ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ, ಮೈಸೂರು

# ಶಿವಾನುಭವ ದಾಸೋಹ–320

**28 ಡಿಸೆಂಬರ್ 2024 * ಶನಿವಾರ * ಸಂಜೆ 6.00**

**ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಮೈಸೂರು**

---

**ದಿವ್ಯ ಆಶೀರ್ವಾದ**

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

**ಅಧ್ಯಕ್ಷತೆ**

**ಶ್ರೀ ಎನ್.ಎಂ. ಶಿವಶಂಕರಪ್ಪ**

ನಿರ್ದೇಶಕರು, ತೋಟಗಾರಿಕೆ ವಿಭಾಗ, ಜೆಎಸ್‌ಎಸ್ ಮಹಾವಿದ್ಯಾಪೀಠ

**ಉಪನ್ಯಾಸ**

**ಶ್ರೀ ಸಿದ್ಧಲಿಂಗ ದೇವರು**

ಶ್ರೀ ಖಾಸ್ಗತ ವಿರಕ್ತಮಠ, ತಾಳಿಕೋಟೆ, ವಿಜಯಪುರ ಜಿಲ್ಲೆ

**ವಿಷಯ : ನೆಮ್ಮದಿ ಹುಡುಕಾಟದಲ್ಲಿ ಜೀವನದ ಸ್ವಾರಸ್ಯ**

**ವಚನ ಗಾಯನ**

**ಕು. ಎನ್. ಚೂಡಾಮಣಿ**

ಮೈಸೂರು

**ತಮಗೆ ಆದರದ ಸ್ವಾಗತ**

**ಪ್ರಾಯೋಜಕರು**

**ಶ್ರೀಮತಿ ಮಹದೇವಮ್ಮನವರು ಮತ್ತು ಮಕ್ಕಳು**

ಗುರು ಸ್ವೀಟ್ ಮಾರ್ಟ್, ಮೈಸೂರು

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೇ ಪೀಠಾಧಿಪತಿಗಳಾದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಪ್ರಸಾದನಿಲಯಗಳು ಹಾಗೂ ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಜನತೆಯ ಸರ್ವಾಂಗೀಣ ಉನ್ನತಿಗೆ ಕಾರಣರಾದರು. ಶಿಕ್ಷಣದ ಮೂಲಕ ಸಾಮಾಜಿಕ ಅಭಿವೃದ್ಧಿ ಸಾಧ್ಯ ಎಂಬುದನ್ನು ಮನಗಂಡಿದ್ದರು. ಶ್ರೀಗಳವರು ಜಾತಿ, ಮತ, ಪಂಥ, ಧರ್ಮ ಭೇದವಿಲ್ಲದೆ ಅನ್ನದಾಸೋಹ, ಜ್ಞಾನದಾಸೋಹದ ಜೊತೆಗೆ ಜನತೆಯ ಸಮಗ್ರ ಅಭಿವೃದ್ಧಿಗಾಗಿ, ನೈತಿಕತೆ ಹಾಗೂ ಧಾರ್ಮಿಕತೆಗಳ ಪ್ರಸಾರಕ್ಕಾಗಿ, ಹಲವಾರು ದಶಕಗಳ ಹಿಂದೆಯೇ ಶರಣತತ್ತ್ವ ಪ್ರಸಾರ ಸಮಿತಿಯಂಥ ಸಂಸ್ಥೆಗಳ ಮೂಲಕ ಧರ್ಮ ದಾಸೋಹವನ್ನು ಪ್ರಾರಂಭಿಸಿದರು. 1986ರಲ್ಲಿ ಶರಣ ಸಾಹಿತ್ಯ ಪರಿಷತ್ತು ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯನ್ನು ಸ್ಥಾಪಿಸಿ ಆಧ್ಯಾತ್ಮಿಕ ಚಿಂತನೆಗೆ ಹೊಸ ಆಯಾಮವನ್ನು ನೀಡಿದರು.

ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ದಿನಾಂಕ 12.5.1996ರಂದು 'ಶಿವಾನುಭವ ದಾಸೋಹ' ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಅಂದಿನಿಂದಲೂ ಪ್ರತಿ ತಿಂಗಳ ಕೊನೆಯ ಶನಿವಾರದಂದು ಈ ಕಾರ್ಯಕ್ರಮವು ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ಧರ್ಮ, ದರ್ಶನ, ವಚನಸಾಹಿತ್ಯ, ಧರ್ಮಗಳ ತೌಲನಿಕ ವಿವೇಚನೆ, ಜೀವನಕಲೆ ಮೊದಲಾದ ವಿಷಯಗಳನ್ನು ಕುರಿತು ಉಪನ್ಯಾಸ ಏರ್ಪಡಿಸಲಾಗುತ್ತಿದೆ.

**ಶ್ರೀ ಎನ್.ಎಂ. ಶಿವಶಂಕರಪ್ಪನವರು** ನಗರ್ಲೆಯಲ್ಲಿ ಜನಿಸಿದವರು, ಕಬ್ಬಹಳ್ಳಿ ಸರ್ಕಾರಿ ಶಾಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಮೈಸೂರು ಯುವರಾಜ ಕಾಲೇಜಿನಲ್ಲಿ ಇಂಟರ್ಮಿಡೀಯೆಟ್ ಮತ್ತು ಬಿಎಸ್ಸಿ ಪದವಿ ಪಡೆದರು. ಕರ್ನಾಟಕ ಸರ್ಕಾರದ ತೋಟಗಾರಿಕೆ ಇಲಾಖೆಯಲ್ಲಿ ವೃತ್ತಿ ಆರಂಭಿಸಿ, ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ಉಪನಿರ್ದೇಶಕರಾಗಿ ಒಟ್ಟು 37 ವರ್ಷಗಳ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದರು. ಪ್ರಸ್ತುತ ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ಶ್ರೀ ಸಿದ್ಧಲಿಂಗ ದೇವರು** ವಿಜಯಪುರ ಜಿಲ್ಲೆ ತಾಳಿಕೋಟಿಯ ಶ್ರೀ ಖಾಸ್ಗತ ವಿರಕ್ತಮಠದ ನಿಯೋಜಿತ ಉತ್ತರಾಧಿಕಾರಿಗಳು. ನಿಡಸೋಸಿಯ ಜಗದ್ಗುರು ಶ್ರೀ ಸಿದ್ಧಸಂಸ್ಥಾನ ಮಠದಲ್ಲಿದ್ದುಕೊಂಡು ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಣವನ್ನು ಪೂರೈಸಿದ್ದಾರೆ. ಮೈಸೂರು ಊಟಿ ರಸ್ತೆಯ ಜೆಎಸ್‌ಎಸ್ ಕಾಲೇಜಿನಲ್ಲಿ ಬಿಎ ಮುಗಿಸಿ ಈಗ ಇಂಗ್ಲಿಷ್ ವಿಷಯದಲ್ಲಿ ಎಂಎ ಅಧ್ಯಯನ ಮಾಡುತ್ತಿದ್ದಾರೆ. ಶ್ರೀ ಸಿದ್ಧಲಿಂಗ ದೇವರು ಈಶಾವಾಸ್ಯ ಉಪನಿಷತ್ ಮತ್ತು ಮಂಕುತಿಮ್ಮನ ಕಗ್ಗಗಳ ಬಗ್ಗೆ ಪ್ರವಚನ ಮಾಡುತ್ತಿದ್ದಾರೆ.

**ಶ್ರೀಮತಿ ಮಹದೇವಮ್ಮನವರು** ಗುರುಲಿಂಗಜಂಗಮಪ್ರೇಮಿಗಳು ಗುರು ಸ್ವೀಟ್ ಮಾರ್ಟ್ ಮಾಲೀಕರಾಗಿದ್ದ ಶ್ರೀ ಬಸವಣ್ಣನವರು ಮತ್ತು ಶ್ರೀಮತಿ ಕೆಂಪನಂಜಮ್ಮನವರ ಸುಪುತ್ರಿ. ಪತಿ ಲಿಂಗೈಕ್ಯ ಶ್ರೀ ಸಂಗರಾಜುರವರು. ಮಗಳು ಡಾ. ಎಸ್. ಮಮತರವರು ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವೈದ್ಯರಾಗಿದ್ದಾರೆ. ಮೂವರು ಗಂಡುಮಕ್ಕಳಾದ ಶ್ರೀ ಎಸ್. ಕುಮಾರ್, ಶ್ರೀ ಎಸ್. ನಟರಾಜ್, ಶ್ರೀ ಎಸ್. ಶಿವಾನಂದರವರುಗಳು ವ್ಯಾಪಾರೋದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರದು ತುಂಬು ಕುಟುಂಬ. ದಾಸೋಹಿಗಳಾದ ಶ್ರೀಮತಿ ಮಹಾದೇವಮ್ಮನವರು ಅನೇಕ ಸಂಘ ಸಂಸ್ಥೆಗಳಿಗೆ ದಾನ ನೀಡಿ, ಪೋಷಕರಾಗಿದ್ದಾರೆ.